

# ಬೆಣ್ಣೆ ದಿಡುಗು

ಚಿತ್ರ–ಬರಹ:
**ಮಲ್ಲಿಕಾರ್ಜುನ ರಾಜನಾಳ**

ಬರದ ನಾಡಿನಲ್ಲೊಂದು ಸುಂದರ ಜಲಪಾತವಿದೆ. ಅದುವೇ ಗುಳೇದಗುಡ್ಡದ ನಯನ ಮನೋಹರ ಬೆಣ್ಣೆ ದಿಡುಗು. ಗುಳೇದಗುಡ್ಡ ಸುತ್ತಮುತ್ತ ಅಬ್ಬರದ ಮಳೆಯಾಯಿತು ಎಂದರೆ ಯುವಕ, ಯುವತಿಯರ ಮನಸ್ಸು ಪುಟ್ಟ ಜಲಪಾತದತ್ತ ಹರಿಯುತ್ತದೆ. ಮಳೆಗಾಲದಲ್ಲಿ ಮಾತ್ರ ಧುಮ್ಮುಕ್ಕಿ ಹರಿಯುವ ಈ ಬೆಣ್ಣೆ ದಿಡುಗು, ಈಗ ಮತ್ತೆ ಮೈತುಂಬುವ ಲಕ್ಷಣಗಳು ಗೋಚರಿಸಿವೆ. ಕಳೆದ ವಾರದಿಂದ ಈ ಭಾಗದಲ್ಲಿ ಮಳೆಯಾಗುತ್ತಿರುವುದರಿಂದ ಜಲಪಾತಕ್ಕೆ ನೀರು ಬರಲು ಆರಂಭವಾಗಿದೆ. ಜುಲೈನಲ್ಲಿ ಜಲಪಾತ ಪೂರ್ಣ ಮೈತುಂಬಿಕೊಳ್ಳಲಿದೆ.

ಗುಳೇದಗುಡ್ಡದಿಂದ ಸುಮಾರು ಮೂರು ಕಿ.ಮೀ ದೂರದ ಗುಡ್ಡದಲ್ಲಿ ಈ ಜಲಪಾತವಿದೆ. ಇದು ಮಳೆಗಾಲದಲ್ಲಿ ನೀರಿನ ಝುರಿಯಾಗಿ ಬೆಟ್ಟದ ತುದಿ ಸೇರಿ ಅಲ್ಲಿ ಸುಮಾರು 35 ಅಡಿ ಎತ್ತರದಿಂದ ಧುಮುಕುತ್ತದೆ. ಮಳೆಗಾಲದಲ್ಲಿ ಸೃಷ್ಟಿಯಾಗುವ ಈ ಜಲಪಾತ ದೂರದ ಊರುಗಳವರಿಗೆ ಗೊತ್ತೇ ಇಲ್ಲ. ಮಳೆಗಾಲದಲ್ಲಿ ತನ್ನ ರಭಸವನ್ನು ಹೆಚ್ಚಿಸಿಕೊಳ್ಳುವ ಈ ಜಲಪಾತವನ್ನು ನೋಡಲು ಸುತ್ತಮುತ್ತಲಿನ ಯುವಕ, ಯುವತಿಯರು ಕುಟುಂಬ ಸಮೇತವಾಗಿ ದಿಡುಗಿಗೆ ಬರುತ್ತಾರೆ.

ಈ ಜಲಪಾತದ ರುದ್ರ ರಮಣೀಯ ನೋಟ ಸವಿಯಲು ಗುಳೇದಗುಡ್ಡದಿಂದ ಹಲವು ಮಾರ್ಗವಾಗಿ ಹೋಗಬಹುದು. ನಿಸರ್ಗ ನಿರ್ಮಿತ ಈ ಸ್ಥಳಕ್ಕೆ ನೇರವಾಗಿ ಎರಡು ದಾರಿಗಳಿವೆ. ಗುಳೇದಗುಡ್ಡ ಪಟ್ಟಣದಿಂದ ಕೊಟೆಕಲ್‌ನ ಹೊಳೆಹುಚ್ಚೇಶ್ವರ ಹಿಂದಿನ ಮಾರ್ಗವಾಗಿ ಕ್ರಮಿಸಬಹುದು. ಅಲ್ಲಿ 3ಕಿ.ಮೀ ವರೆಗೆ ಡಾಂಬರ್ ರಸ್ತೆ ಇದೆ. ಅಲ್ಲಿಯವರೆಗೆ ವಾಹನಗಳು ತೆರಳಬಹುದು.  ಮುಂದೆ 1ಕಿ.ಮೀ. ಗುಡ್ಡದಲ್ಲಿ ಕಾಲ್ನಡಿಗೆ ಮೂಲಕ ತೆರಳಬೇಕು. ಇನ್ನೊಂದು ದಾರಿ ಮೂಕೇಶ್ವರಿ ದೇವಸ್ಥಾನದ ಹಿಂದೆ ಇರುವ ಕೊಳ್ಳದಿಂದ ಒಂದು ಬೆಟ್ಟ ಹತ್ತಿ ಇಳಿದರೆ ಜಲಪಾತ ಕಾಣಿಸುತ್ತದೆ. ಇದು ಸಂಪೂರ್ಣ ಕಾಲ್ನಡಿಗೆಯ ಮಾರ್ಗ.